# ಸೈಕಲ್‌ನಲ್ಲಿ

**ಈ ದೇಶದ ಪ್ರತಿದಿನದ ಹವಾಮಾನವೂ ಚಂಚಲ. ಬಿಸಿಲು, ಮೋಡ, ಮಳೆ, ಚಳಿ, ಬಿರುಗಾಳಿ. ಮಂಜು, ತೂಫಾನು– ಒಂದೇ ಗಂಟೆಯೊಳಗೆ ಒಂದರ ಹಿಂದೆ ಒಂದರಂತೆ ಮರುಕಳಿಸುತ್ತವೆ.**

ಚಿತ್ರ– ಲೇಖನ: **ಗಣೇಶ್ ನಾಯಕ್**


ಸೈಕಲ್ ಸವಾರಿಯನ್ನು ಯಶಸ್ವಿಯಾಗಿ ಮುಗಿಸಿದ ಸಂತಸದಲ್ಲಿ ಲೇಖಕ

ಕಳೆದ ವರ್ಷ ಜುಲೈನಲ್ಲಿ, ನನ್ನ ಆರು ವಾರಗಳ ಹಿಮಾಚಲ ಪ್ರದೇಶದ ಸ್ಪಿತಿ ಕಣಿವೆಯ, ಒಂಟಿ ಸೈಕಲ್ ಸವಾರಿ ಸಮಯದಲ್ಲಿ ನಾನು, ಜೋಕಿಮ್ ವಿಲ್ಲೆಯನ್ನು ಮೊದಲ ಬಾರಿ ಭೇಟಿಯಾದದ್ದು. 35ರ ಹರೆಯದ, ಅಜಾನುಬಾಹು, ಜೋಕಿಮ್ ಜರ್ಮನ್ ಪ್ರಜೆ. ವೃತ್ತಿಯಲ್ಲಿ ಮೆಡಿಕಲ್ ನರ್ಸ್. ಸ್ವಿಝರ್ಲೆಂಡಿನಲ್ಲಿ ಆತನ ವಾಸ ಮತ್ತು ಕೆಲಸ. ನನ್ನಂತೆ ಸೈಕಲ್ ಪರ್ಯಟನ ಪ್ರಿಯ. ಪ್ರತಿ ವರುಷ, ಬೇರೆ ಬೇರೆ ದೇಶಗಳಲ್ಲಿ ಸೈಕಲ್ ಚಾರಣ ಆತನ ನೆಚ್ಚಿನ ಹವ್ಯಾಸ. ಅದರಂತೆ, ಆ ವರ್ಷ ಭಾರತಕ್ಕೆ ಬಂದಿದ್ದ. ಮುಂದೆ ನಾವಿಬ್ಬರೂ ಒಟ್ಟಿಗೆ ಸ್ಪಿತಿ ಕಣಿವೆಯನ್ನು ರಂಜನೀಯವಾಗಿ ಸುತ್ತಿದ ಹನ್ನೊಂದು ದಿನಗಳಲ್ಲಿ, ನಮ್ಮ ಗೆಳೆತನ ಗಟ್ಟಿಗೊಂಡಿತ್ತು. ಆದರೆ ಈ ಅಚಾನಕ್ ಭೇಟಿ ಮತ್ತು ಗೆಳೆತನ ಮುಂದೊಂದು ದಿನದ ಅಪೂರ್ವ ಸಾಹಸಕ್ಕೆ ನಾಂದಿ ಹಾಡುತ್ತದೆ ಎಂದು ನಾನೆಂದೂ ಎಣಿಸಿರಲಿಲ್ಲ.

ಆರು ತಿಂಗಳ ಹಿಂದೆ, ಜೋಕಿಮ್‌ನಿಂದ ನನಗೊಂದು ಆಹ್ವಾನ ಬಂತು. 'ಈ ವರ್ಷ ಐಸ್‌ಲ್ಯಾಂಡ್ ದೇಶವನ್ನು ಒಂದು ತಿಂಗಳು ಸುತ್ತಲು ಹೋಗುತ್ತಿದ್ದೇನೆ, ನನ್ನ ಜತೆ ಸೇರುತ್ತೀಯಾ?' ನಾನು ಕೂಡಲೇ ಸೈ ಎಂದೆ. ವೀಸಾ ಪಡೆಯಲು ಬೇಕಾದ ಎಲ್ಲಾ ದಾಖಲೆಗಳನ್ನು, ಜೋಕಿಮ್ ಕೂಡಲೇ ಕಳುಹಿಸಿ ಕೊಟ್ಟ, ಯೂರೋಪಿನ ಪ್ರವಾಸಿ ವೀಸಾ ನನಗೆ ಸಲೀಸಾಗಿ ಸಿಕ್ಕಿಯೂ ಬಿಟ್ಟಿತು.

ಎಲ್ಲಾ ಸಿದ್ಧತೆಗಳನ್ನು ಮುಗಿಸಿ, ಮೇ ಕೊನೆಯಲ್ಲಿ ಬೆಂಗಳೂರಿನಿಂದ ಸೈಕಲ್ ಸಮೇತ ವಿಮಾನ ಏರಿದೆ, ಫ್ರಾಂಕ್‌ಫರ್ಟ್ ಮೂಲಕ ಸ್ವಿಝರ್ಲೆಂಡಿನ ರಾಜಧಾನಿ ಜಿನೀವಾ ಮುಟ್ಟಿದೆ. ಎದುರುಗೊಳ್ಳಲು ವಿಮಾನ ನಿಲ್ದಾಣಕ್ಕೆ ಗೆಳೆಯ ಬಂದಿದ್ದ. ಅಲ್ಲಿಂದ 40 ಕಿ.ಮೀ. ದೂರದಲ್ಲಿ ಲೆತ್‌ಜಿನೀವಾ ಇರುವ ಲೋಜಾನ್ (lausanne) ಎಂಬಲ್ಲಿ ಆತನ ಮನೆ. ಆತನ ಮನೆಯಲ್ಲೇ, ಪ್ರೀತಿಯ ಆತಿಥ್ಯ ಸ್ವೀಕರಿಸುತ್ತ, ನಾಲ್ಕು ದಿನ ಅಲ್ಲೇ ಸುತ್ತಿ, ಹೊಸ ಪರಿಸರಕ್ಕೆ, ವಾತಾವರಣಕ್ಕೆ ಹೊಂದಿಕೊಂಡೆ. ಐಸ್‌ಲ್ಯಾಂಡ್ ಪ್ರವಾಸಕ್ಕೆ ತಯಾರಾದೆ.

ಜೋಕಿಮ್‌ನ ಇನ್ನೊಬ್ಬ ಗೆಳೆಯ 25ರ ತರುಣ ಯಾನಿಕ್ ಕೂಡಾ ಈ ಸಂಚಾರಕ್ಕೆ ನಮ್ಮ ಜತೆಗೂಡಿದ. ಒಂದು ತಿಂಗಳ ಕಷ್ಟದ ಪ್ರವಾಸಕ್ಕೆ ಬೇಕಾದ ಎಲ್ಲವನ್ನೂ ಅಚ್ಚುಕಟ್ಟಾಗಿ ಹೊಂದಿಸಿಕೊಂಡು, ಮೂವರೂ ಸೈಕಲ್ ಸಮೇತ ಜಿನೀವಾದಿಂದ ಐಸ್‌ಲ್ಯಾಂಡಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಿರುವ ಕೆಪ್ಲಾವಿಕ್ (Keflavik )ಪಟ್ಟಣಕ್ಕೆ ಹಾರಿದೆವು.

ನಮ್ಮ ಪೂರ್ವ ಯೋಜನೆಯ ಪ್ರಕಾರ, ಕೆಪ್ಲಾವಿಕ್ ಪಟ್ಟಣದಿಂದ ಹೊರಟು, ರಿಂಗ್‌ರೋಡ್ ಮೂಲಕ, ಇಡೀ ದೇಶಕ್ಕೊಂದು ಸುತ್ತು ಹಾಕಿ, ತಿರುಗಿ ಕೆಪ್ಲಾವಿಕ್‌ಗೆ ಮರಳುವ ಇರಾದೆ ಇತ್ತು. ಅದರಂತೆ, ಜೂನ್ 3 ರಂದು, ನಾವು ಮೂವರು ಸೈಕಲೇರಿ ಪೂರ್ವಾಭಿಮುಖವಾಗಿ ಹೊರಟೆವು. ಹೊರಟಾಗ ಶುಭ್ರವಾಗಿ ಚೆನ್ನಾಗಿದ್ದ ಎಲ್ಲವೂ, ಕ್ಷಣದಲ್ಲಿ ಬದಲಾಗಿ, ಮೋಡ ಕವಿದು, ಜಡಿ ಮಳೆ ಸುರಿದು, ಬಿರುಸಿನ ಗಾಳಿ ಬೀಸಲಾರಂಭಿಸಿತು. ಬೀಸುವ ಗಾಳಿಯ ರಭಸ ಹೇಗಿತ್ತೆಂದರೆ, ಸೈಕಲ್ಲು ತುಳಿಯುವುದಿರಲಿ, ನಡೆಯುತ್ತ ಅದನ್ನು ದೂಡುವುದು ಕೂಡಾ ಅಸಾಧ್ಯವಾಗ ತೊಡಗಿತು. ಆದರೂ, ಆಹಾರ, ಬಟ್ಟೆ, ಬಿಡಾರ, ಅಡುಗೆ ಸಲಕರಣೆಗಳನ್ನು ಹೊತ್ತುಕೊಂಡು ಭಾರಗೊಂಡ ಸೈಕಲ್‌ಗಳನ್ನು ಸುಧಾರಿಸುತ್ತ, ಒಬ್ಬರಿಗೊಬ್ಬರು ಹುರುಪು



